

ನಾನು ನಿನ್ನ ಶಾಲೆಗೆ ಬಂದು ನಿನ್ನ ಸಹಪಾಠಿಗಳ ಜೊತೆ, ಪ್ರಾಧ್ಯಾಪಕರ ಜೊತೆ ಮಾತನಾಡಬಲ್ಲೆ. ಆದರೆ ಅದರಿಂದ ಹೆಚ್ಚು ಪ್ರಯೋಜನ ಆಗದು ಮರಿ' ಎಂದು ವಾಸ್ತವ ಅರ್ಥ ಮಾಡಿಸಿದರು.

ಪತಿ ಸೇನೆಯಲ್ಲಿ ಇರುವಾಗ, ಪ್ರತಿ ಎರಡು ವರ್ಷಕ್ಕೆ ವರ್ಗವಾಗುವುದು; ಹೊಸ ಊರು, ಹೊಸ ಸ್ಥಳ, ಹೊಸ ಶಾಲೆ. ಹಾಗೆಂದೇ ಆ ತಾಯಿ, ಮಗುವಿಗೆ ಹೇಳಿದಳು: 'ನೀನು ನಿನ್ನ ಮೆಡಿಕಲ್ ಸ್ಥಿತಿಯನ್ನು ನಿನ್ನ ಸಹಪಾಠಿಗಳಿಗೆ, ಗೆಳತಿಯರಿಗೆ ವಿವರಿಸಿ ಹೇಳು'. ಅಮ್ಮನ ಬುದ್ಧಿವಾದ ಸಹಾಯಕ್ಕೆ ಬಂದಿತು. ತನ್ನ ಸ್ಥಿತಿಯನ್ನು ಮುಚ್ಚಿಡದೆ ಸ್ನೇಹಿತರಿಗೆ, ಸಹಪಾಠಿಗಳಿಗೆ ವಿವರಿಸಿದಳು. ಮೆಲ್ಲನೆ ಆಕೆಯ ಸುತ್ತ ನೆರವಾಗಲು ನಿಲ್ಲುವ ತಂಡವೊಂದು ಸೃಷ್ಟಿಯಾಗಿತ್ತು. ಪ್ರಾಥಮಿಕ ಶಾಲೆಯಲ್ಲಿ ಜೊತೆಯಾದ ಸ್ನೇಹಿತರು ಬದುಕಿನುದ್ದದ ಸಂಗಾತಿಯರಾದರು.

## ಹೋರಾಟದ ವರ್ಷಗಳು

ಬದುಕು ಮುಂದಕ್ಕೆ ಸಾಗಿತು. ದೀಪಾ ಮತ್ತೊಂದು ಮಗುವನ್ನು ಬಯಸಿದರು. ಅಂಬಿಕಾ ಅವರ ಬದುಕಿಗೆ ಆಗಮಿಸಿದಳು. ಇಸವಿ 1999, ಬದುಕು ಹಳಿಗೆ ಬಂದ ಆ ಹೊತ್ತು, ಕಾರ್ಗಿಲ್ ಯುದ್ಧ ಆರಂಭವಾಯಿತು. ಪತಿ ದೇಶ ರಕ್ಷಣೆಗೆ ಕಾರ್ಗಿಲ್‌ಗೆ ತೆರಳಿದರು. ಅಂತಹ ಸಂಕಷ್ಟದ ಸಮಯದಲ್ಲಿ, ಅದೆಷ್ಟೋ ವರ್ಷಗಳಿಂದ ದೀಪಾ ಅವರ ಬೆನ್ನಹುರಿಯಲ್ಲಿ ಸದ್ದಿಲ್ಲದೆ ಬೆಳೆಯುತ್ತಿದ್ದ ಒಂದು ಗಡ್ಡೆ ಅವರನ್ನು ತೀವ್ರ ನೋವಿನಲ್ಲಿ ಕಾಡಿಸಿತು. ವೈದ್ಯರು ಹೇಳಿದ್ದರು, 'ಇನ್ನು ಗಡ್ಡೆಯನ್ನು ಹಾಗೆಯೇ ಬಿಟ್ಟರೆ, ಅದು ಬೆಳೆದು ಸಾವು ನಿಶ್ಚಿತ. ಆದರೆ ಗಡ್ಡೆಯನ್ನು ಕತ್ತರಿಸಿ ಹೊರತೆಗೆದರೆ, ನಿಮ್ಮ ಉಳಿದ ಬದುಕು ಪೂರಾ ಗಾಲಿ ಕುರ್ಚಿಯಲ್ಲಿ ಕಳೆಯುವುದು'. ದೀಪಾ ಬದುಕನ್ನು ಆಯ್ದುಕೊಂಡರು.

ಗಡ್ಡೆಯನ್ನು ತೆಗೆದುಹಾಕಲು ಶಸ್ತ್ರಕ್ರಿಯೆಯ ಅಗತ್ಯವಿತ್ತು. ವೈದ್ಯರು ಶಸ್ತ್ರಕ್ರಿಯೆಗೆ ಮೊದಲೇ ಹೇಳಿದ್ದರು, 'ಆ ಗಡ್ಡೆಯನ್ನು ತೆಗೆಯುವುದರಿಂದ, ಮಿದುಳು ಮತ್ತು ಸೊಂಟದ ಕೆಳಗಿನ ದೇಹದ ಭಾಗದ ನಡುವೆ ಇರುವ ಕೊಂಡಿ ಕಡಿದು ಹೋಗುತ್ತದೆ'. ಮುಂದುವರೆಸಿ ಮತ್ತೆ ವೈದ್ಯರು ಹೇಳಿದರು: 'ಏಳು ದಿನ ಬಿಡುವು ಮಾಡಿಕೊಳ್ಳಿ. ನಿಮ್ಮ ಕಾಲ ಮೇಲೆ ನಡೆದಾಡಿ, ನಡೆಯುವ ಖುಷಿಯನ್ನು ಅನುಭವಿಸಿ ಸಂಭ್ರಮಿಸಿ ಹಿಂತಿರುಗಿ ಬನ್ನಿ. ಆಪರೇಷನ್ ಮಾಡುತ್ತೇನೆ'.

ಏಳು ದಿನದ ನಂತರ ದೀಪಾ ಮಕ್ಕಳನ್ನು ತಾಯಿಯ ಬಳಿ ಬಿಟ್ಟು, ದಿಲ್ಲಿಯ 'ಆರ್ಮಿ ರಿಸರ್ಚ್ ಅಂಡ್ ರೆಫರಲ್ ಆಸ್ಪತ್ರೆ'ಗೆ ತಾವೊಬ್ಬರೇ ಬಂದಿಳಿದರು. 'ನಿಮ್ಮೊಡನೆ ಯಾರಿದ್ದಾರೆ?' ಎಂದು ವೈದ್ಯರು ಕೇಳಿದಾಗ 'ಯಾರಿಲ್ಲ' ಎಂದು ಉತ್ತರಿಸಿದ್ದರು. ಅವರೊಡನೆ ಇರಬೇಕಾದವರು ದೇಶರಕ್ಷಣೆಯಲ್ಲಿದ್ದರು, ಸರಹದ್ದಿನಲ್ಲಿ. ದೀಪಾಗೆ ಪತಿಯೊಡನೆ ಯಾವುದೇ ರೀತಿಯ ಸಂಪರ್ಕ ಸಾಧ್ಯವಿರಲಿಲ್ಲ. ವೈದ್ಯರು ತುಂಬಾ ಒಳ್ಳೆಯವರಿದ್ದರು. ಅವರು ದೀಪಾಗೆ ಹೇಳಿದರು, 'ನೀವು ಬದುಕುಳಿಯಬೇಕು, ಈ ಸವಾಲಿನಂತಹ ಪರಿಸ್ಥಿತಿಯನ್ನು ದಾಟಿ ಬರಬೇಕು. ಕಾರಣ, ನಿಮಗೆ ನಿಮ್ಮ ಪತಿ ಯುದ್ಧರಂಗದಿಂದ ಬದುಕಿ ಬರುತ್ತಾರೆ ಎಂದು ಕೂಡ ತಿಳಿಯದು'.

ಸ್ಪೈನಲ್ ಸರ್ಜರಿ ನಡೆಯಿತು. ಮತ್ತೆ ಮತ್ತೆ ಕಾಣಿಸಿಕೊಂಡ ಬೆನ್ನಹುರಿಯ ಗಡ್ಡೆಗಳು, ಶಸ್ತ್ರಕ್ರಿಯೆಗಳು ಅವರ ಬೆನ್ನಹುರಿಯನ್ನು ಹಾಳು ಮಾಡಿ ದೀಪಾರನ್ನು 'ಪ್ಯಾರಪ್ಲೇಜಿಕ್' ಆಗಿಸಿದವು. ತುಂಬು ಚಟುವಟಿಕೆಯ ದೀಪಾಗೆ ಬದುಕು ತಲೆಕೆಳಗಾಗಿತ್ತು. ಗಾಲಿಕುರ್ಚಿಯಲ್ಲಿ ಸಿಕ್ಕಿಬಿದ್ದ ಬದುಕಿಗೊಂದು ಹೊಸ ಉದ್ದೇಶವನ್ನು, ಗುರಿಯನ್ನು ಕಂಡುಕೊಳ್ಳಬೇಕಿತ್ತು.

ಅವರ ಎದೆಯ ಕೆಳಗಿನ ದೇಹದ ಭಾಗ ಪೂರ್ಣ ನಿಸ್ತೇಜವಾಗಿದೆ. ಅದು ಬರೀ ಪ್ಯಾರಲೈಸ್ ಆಗಿರಲಿಲ್ಲ. ಪ್ಯಾರಪ್ಲೇಜಿಕ್ ಅಂದರೆ ಕಾಲುಗಳ ಮೇಲೆ ನಿಯಂತ್ರಣ ಮಾತ್ರವಲ್ಲ, ಮಲಮೂತ್ರಗಳ ಮೇಲೂ ನಿಯಂತ್ರಣ ಕಳೆದುಹೋಗುತ್ತದೆ. ಇದು ಅತಿ ದೊಡ್ಡ ಸವಾಲಾಗಿತ್ತು. ದೀಪಾ ಹೇಳಿದ್ದರು: 'ಅವರು ತಾವು ಕುಡಿಯುವ ಪ್ರತಿ ಲೋಟ ನೀರೂ ಅಳತೆ ಮಾಡುತ್ತಾರೆ'. ಕಾರಣ ಹೆಚ್ಚು ಕುಡಿದರೆ, ಮೂತ್ರಕೋಶ ತುಂಬಿ ಹೊರಚೆಲ್ಲಿ, ಬಟ್ಟೆ ಒದ್ದೆಯಾಗುತ್ತದೆ. ಹಾಗೆಂದು ನೀರು ಕುಡಿಯದಿದ್ದರೆ, ಮೂತ್ರನಾಳದ ಸೋಂಕು ರೋಗ ಬಹಳ ಸುಲಭವಾಗಿ ಬಂದು ಬಡಿಯುವುದು.